ಹೇಳುತ್ತೇನೆ. ಇದರಿಂದ ಅವರು ತೃಪ್ತಿಯಾಗಬೇಕು ಎಂದು ಹೇಳುತ್ತೇನೆ. ಮತ್ತೆ ಬಂಡಿಗಳನ್ನು ಕೂಡಾ ಅರಣ್ಯಗಳಲ್ಲಿ ಒಡಾಡಲಿಕ್ಕೆ ನಾವು ಬಿಡುವುದಿಲ್ಲ.

ಶ್ರೀ ಪಾಟಾಳ್ ನಾಗರಾಜ್.— ತಾವು ವನ್ಯ ಮೃಗಗಳ ರಕ್ಷಣೆಯ ಬಗ್ಗೆ ಒಂದು ಕಟ್ಟುನಿಟ್ಟಾದ ನಿರ್ಧಾರಕ್ಕೆ ಬರಬೇಕು: ನೀವು ಕಾಯ್ದೆಯನ್ನು ಚದಲಾವಣೆ ಮಾಡುತ್ತೇನೆ ಎಂದು ಹೇಳಬೇಕು. ಇಲ್ಲದಿದ್ದರೆ ವನ್ಯ ಮೃಗಗಳನ್ನು ಸಂಪೂರ್ಣವಾಗಿ ನಾಶ ಮಾಡುತ್ತೀರಿ ಎಂದು ನಮಗೆ ಭಾವನೆ ಬರುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.— ನಾನು ಬಂದು ಒಂದೂವರೆ ತಿಂಗಳಾಯಿತು.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್.— ಹುಲಿಯನ್ನು ಕೊಂದವರು ಬಸವಲಿಂಗಪ್ಪನವರು ಎಂದು ನಾನು ಹೇಳುತ್ತಿಲ್ಲ.

(ಗೊಂದಲ)

ಅಧ್ಯಕ್ಷರು.— ಕಾಯ್ದೆಯನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್.— ಈ ಹುಲಿಗಳ ಬಗ್ಗೆ ತೆಗೆದುಕೊಂಡಿರತಕ್ಕಂಥ ನಿರ್ಧಾರ ಸರಿಯಿಲ್ಲ. ಆದ್ದರಿಂದ ನಾನು ಸಭಾತ್ಯಾಗ ಮಾಡುತ್ತೇನೆ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.— ಸರ್ಕಾರದವರು ಈ ಬಗ್ಗೆ ಏನು ಒಂದು ಹೇಳಿಕೆ ಕೊಟ್ಟಿದ್ದಾರೆ....

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್.—ಐದು ವರ್ಷದಿಂದ ಏನೇನು ನಡೆದಿದೆ ಎಂಬ ಬಗ್ಗೆ ತನಿಖೆ ಆಗಬೇಕು. ಮಂತ್ರಿಗಳ ಉತ್ತರದಿಂದ ನನಗೆ ಸಮಾಧಾನ ಆಗಿಲ್ಲ. ಆದ್ದರಿಂದ ನಾನು ಸಭಾ ತ್ಯಾಗ ಮಾಡುತ್ತೇನೆ.

(ಪಕ್ಷೇತರ ಸದಸ್ಯರಾದ ಶ್ರೀ ಪಾಟಾಳ್‌ನಾಗರಾಜ್ ಅವರು ಸಭಾ ತ್ಯಾಗಮಾಡಿದರು)

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ಐದು ಹುಲಿಗಳು ಸತ್ತಿವೆ ಎಂದು ಸರ್ಕಾರದ ವರದಿ ಕೊಟ್ಟಿದೆ. ಅದು ಬಹಳ ಸುಳ್ಳು ವರದಿ ಆಗಿದೆ ಒಟ್ಟು ಒಂಬತ್ತು ಹುಲಿಗಳು ಸತ್ತಿದೆ. ನಾಗರ ಹೊಳೆ ಅಭಯಾರಣ್ಯದಲ್ಲಿ ರೀಸರ್ಚ್ ಮಾಡಬೇಕು ಎಂಬ ನಿಯಮ ಏನು ಇತ್ತೋ ಅಲ್ಲಿ ಹುಲಿ ಸತ್ತಿಲ್ಲ. ಎಲ್ಲಾ ಸತ್ತಿರುವುದು ಹೆಗ್ಗಡದೇವನ ಕೋಟೆ ತಾಲ್ಲೂಕು ಸಂಕದ ಕಟ್ಟೆಯಲ್ಲಿ ಮತ್ತು ಅಂತರ ಸಂತೆ ಹೋಬಳಿಯಲ್ಲಿ ಸುಮಾರು ೭-೮ ಹುಲಿಗಳು ಸತ್ತಿವೆ. ಇಲ್ಲಿ ಸತ್ತು ಹೋಗಿರುವುದನ್ನು ತೆಗೆದುಕೊಂಡು ಹೋಗಿ ಅಲ್ಲಿ ಸತ್ತಿದೆ ಎಂದು ಅವರು ಹೇಳಿದ್ದಾರೆ ಉಲ್ಲಾಸ್ ಕಾರಂತ್ ಅವರಿಗೆ ಹೆಗ್ಗಡದೇವನ ಕೋಟೆ ತಾಲ್ಲೂಕ ಶಿಕಾರಾಪುರ ಪಕ್ಕದಲ್ಲಿ ೨೦ ಎಕರೆ ಜಮೀನು ಇದೆ. ಅಲ್ಲಿ ನೀಲಗಿರಿ ಸಸಿಗಳನ್ನು ಮತ್ತು ಸರ್ವ ಗಿಡಗಳನ್ನು ಹಾಕಿದ್ದಾರೆ. ಅವರು ಪ್ರತಿ ದಿನ ಮೈಸೂರಿಗೆ ಬಂದು ಹೋಗುತ್ತಾರೆ. ರೀಸರ್ಚ್ ಮಾಡುವಾಗ ಶಿಕಾರಿ ಮಾಡುವುದು ಸಹ ಒಂದು ವಾಡಿಕೆ. ಹುಲಿ ಸಿಕ್ಕರೆ ಹುಲಿ ಶಿಕಾರಿ ಮಾಡುತ್ತಾರೆ. ಅದನ್ನು ಸಾಯಿಸುತ್ತಾರೆ. ಹಾಗೆ ಯಾವ ಪ್ರಾಣಿ ಸಿಕ್ಕರೆ ಅದನ್ನು ಸಾಯಿಸುವ ಅಭ್ಯಾಸ ಆಗಿದೆ. ಮಾನ್ಯ ಮಂತ್ರಿಗಳು ಹೇಳಿದರು, ನಾವು ತಪ್ಪಿನಿಂದ ವರದಿ ತರಿಸುತ್ತೇವೆ, ತನಿಖೆ ಮಾಡುತ್ತೇನೆ. ಎಂದು. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಪ್ಪಿನಿಂದ ವರದಿಯನ್ನು ತರಿಸಿದರೆ ಅವರ ಮೇಲೆ ಯಾವ ರೀತಿಯ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಯಾಕೆಂದರೆ ಅವರು ಬಹಳ ಶಕ್ತಿವಂತರಾಗಿದ್ದಾರೆ. ಮತ್ತು ಅವರಿಗೆ ಸಾಕಷ್ಟು ಪ್ರಭಾವ ಇದೆ. ಅವರ ಸೋದರ ಮಾವ ಶಾಮ ಸುಂದರ್ ಎಂಬುವವರು ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಆಗಿದ್ದರು. ಅವರು ಅಧಿಕಾರಿಗಳ ಮೇಲೆ ಪ್ರಭಾವ ಬೀರುತ್ತಾರೆ. ಆದ್ದರಿಂದ ವರದಿಯನ್ನು ಸರಿಯಾದ ರೂಪದಲ್ಲಿ ಕೊಡಿಸುವುದಿಲ್ಲ.

(ಗೊಂದಲ)